782 ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) : ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆ ಬಸವನಬಾಗೇವಾಡಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಚಿಮ್ಮಲಗಿ ಭಾಗ–2 ಹಾಗೂ ಹುಣಶ್ಯಾಳ ಮಧ್ಯದಲ್ಲಿ ಚಕ್ಕಡಿಗಳ ಸಂಚಾರಕ್ಕೆ ರೈಲ್ವೆ ಹಳಿಯ ಮೇಲೆ ರಸ್ತೆ ಕಲ್ಪಿಸಿಕೊಡಲು ರೈಲ್ವೆ ಇಲಾಖೆಯಿಂದ ಅನುಮತಿ ನೀಡುವ ಹಾಗೂ ಈ ರಸ್ತೆಯನ್ನು ರಾಜ್ಯ ಸರ್ಕಾರದಿಂದ ಅಭಿವೃದ್ಧಿಪಡಿಸುವ ವಿಷಯವು ಸರ್ಕಾರದ ಗಮನಕ್ಕೆ ಬಂದಿಡೆಯೇ;

ಆ) ಈ ಕಾಮಗಾರಿಯ ವಿಷಯವು ಪುನರ್ ವಸತಿ ಕೇಂದ್ರಗಳ ಬೇಡಿಕೆಯಾಗಿರುವುದು ನಿಜವಲ್ಲವೇ;

ಇ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಳ್ಳಲಿರುವ ಕ್ರಮವೇನು?

ಶ್ರೀ. ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಬಂದಿದೆ.

ಆ) ನಿಜ.

ಇ) ರೇಲ್ವೆ ಮಂಡಳಿಯ ಮಾರ್ಗಸೂಚಿಯ ಪ್ರಕಾರ ಈಗಾಗಲೇ ಕಮೀಷನ್ ಆಗಿರುವ ರೇಲ್ವೆ ಹಳಿಗಳ ಮೇಲೆ ಹೊಸ ಮಾನವ ರಹಿತ ರೇಲ್ವೆ ಲೆವಲ್ ಕ್ರಾಸಿಂಗ್‌ಗಳನ್ನು ಸುರಕ್ಷತಾ ಅಪಾಯದ ಕಾರಣದಿಂದ ನಿರ್ಮಿಸುವಂತಿಲ್ಲ.

761 ಶ್ರೀ ದಿನೇಶ್ ಗುಂಡೂರಾವ್ : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಿರ್ಮಿಸುತ್ತಿರುವ ಹೊಸ ರಸ್ತೆಗಳು ಯಾವವು(ವಿವರ ನೀಡುವುದು);

ಆ) ರಾಜ್ಯದಲ್ಲಿ ಅಭಿವೃದ್ಧಿಗೊಳಿಸುತ್ತಿರುವ ರಸ್ತೆಗಳು ಯಾವುವು;

ಇ) ಬಿ.ಓ.ಟಿ ಆಧಾರದ ಮೇಲೆ ಅಭಿವೃದ್ಧಿಗೊಳಿಸುತ್ತಿರುವ ರಸ್ತೆಗಳೆಷ್ಟು ಅವುಗಳು ಯಾವುವು (ವಿವರ ನೀಡುವುದು);

ಈ) ಇವುಗಳನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಪ್ರಸಕ್ತ ಸಾಲಿನಲ್ಲಿ ಲೊಕೋಪಯೋಗಿ ಇಲಾಖೆ ವತಿಯಿಂದ ಭೂಸ್ವಾಧೀನ ಮಾಡಿಕೊಂಡು ಯಾವುದೇ ಹೊಸ ರಸ್ತೆಗಳನ್ನು